# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ನವೆಂಬರ್- 2016

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ-1

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

ದಿನಾಂಕ: 26.11.2016 ಗರಿಷ್ಟ ಅಂಕಗಳು-100 ಸಮಯ: ಬೆಳಗ್ಗೆ 9.30 ರಿಂದ 11.30 ರವರೆಗೆ

---

**1. ಈ ಕೆಳಕಂಡ ವಾಕ್ಯಗಳನ್ನು ಯಾವ ಪಾಠದಿಂದ ಆರಿಸಿದೆ? ಯಾರು? ಯಾರಿಗೆ? ಯಾವ ಸಂದರ್ಭದಲ್ಲಿ ಹೇಳಿದರು?ವಿವರಿಸಿ:- (ಐದಕ್ಕೆ ಮಾತ್ರ ಉತ್ತರಿಸಿ)** **20 ಅಂಕಗಳು**

ಅ. ಎತ್ತು ಹಾಲು ಕೊಡುವ ಹಾಗಿದ್ದಲ್ಲಿ ಗಂಡಸರು ಹೆರುವುದಲ್ಲಿ ಏನಾಶ್ಚರ್ಯ?

ಆ. ಒಂದು ವಿಷಯವನ್ನು ಕೇಳಿದರೆ ಅದನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಅದರಿಂದ ಆಚರಣೆಯಲ್ಲಿ ತೊಡಗುತ್ತಾರೆ.

ಇ. ಈ ಔಷಧ ಒಂದೇ ನಿಮ್ಮ ಕಾಯಿಲೆಗೆ ಮದ್ದು, ಇದನ್ನು ಸ್ವಲ್ಪ ಎತ್ತಿನ ಹಾಲಿನಲ್ಲಿ ಕದಡಿ ಕುಡಿಯಬೇಕು.

ಈ.ಅವೆಲ್ಲಾ ಸಾಧ್ಯವಿಲ್ಲ, ಕೊಟ್ಟೇ ಮುಂದಕ್ಕೆ ಹೋಗಬೇಕು.

ಉ.ನಾನು ಮೋಸ ವಂಚನೆ ಮಾಡಿದ್ದರೂ ರಾಮಯ್ಯನ ಬಾಯಿಂದ ಧರ್ಮಕ್ಕೆ ವಿರುದ್ಧವಾದ ತೀರ್ಪು ಬರೊಲ್ಲಾ ಅಂತ ನನಗೆ ನಂಬಿಕೆ ಇದೆ.

ಊ.ತಂಗಿ! ನನ್ನ ದಳಪತಿ ಮಹಾಪರಾಧ ಮಾಡಿದ, ನೀನು ಅಂಜಬೇಕಾಗಿಲ್ಲ, ನಿನ್ನ ತಂದೆ ತಾಗಿಗಳ ಬಳಿಗೆ ನಿನ್ನನ್ನು ಕಳುಹಿಸುತ್ತೇನೆ.

ಋ.ಈ ದಿನ ಮಧ್ಯಾಹ್ನ ನಮ್ಮ ತಂದೆ ಒಂದು ಮಗು ಹೆತ್ತರು.

**2. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡಕ್ಕೆ ಒಂದು ಪುಟ ಮೀರದಂತೆ ವಿವರಣೆ ಬರೆಯಿರಿ:-** **20 ಅಂಕಗಳು**

ಅ. ಕಾಳಿದಾಸನು ವಿಗ್ರಹಗಳ ಬೆಲೆಯನ್ನು ನಿರ್ಧರಿಸಿದ ರೀತಿ.

ಆ. ಅರಣ್ಯ ಸಂಪತ್ತು

ಇ. ಚಿತ್ರಗಾರ ರವಿವರ್ಮ

**3. ಈ ಕೆಳಗಿನ ಯಾವುದಾದರೂ ಐದಕ್ಕೆ ಸಮನಾರ್ಥಕ ಪದ ಬರೆಯಿರಿ:-** **5 ಅಂಕಗಳು**

ಅ.ಗ್ರಹಿಸು ಆ.ಶ್ರಮಪಟ್ಟು ಇ.ಮಧ್ಯರಾತ್ರಿ ಈ.ಉಪಾಧ್ಯಾಯ ಉ.ಅಚ್ಚರಿ
ಊ. ವಂಚನೆ ಋ. ವಿವರಣೆ

**4. ಈ ಕೆಳಗಿನ ಯಾವುದಾದರೂ ಐದಕ್ಕೆ ವಿರುದ್ಧ ಪದ ಬರೆಯಿರಿ:-** **5 ಅಂಕಗಳು**

ಅ.ಶ್ರಮಜೀವಿ ಆ. ಆತಂಕ ಇ. ಜಾಗ್ರತೆ ಈ. ಪಕ್ಷಪಾತ ಉ. ಹಿರಿದು
ಊ. ಶತ್ರು ಋ. ಸಹನೆ ೠ. ಹಗಲು

**5. ಈ ಕೆಳಗಿನ ಅಂಕಿಗಳನ್ನು ಅಕ್ಷರಗಳಲ್ಲಿ ಬರೆಯಿರಿ:- (ಐದಕ್ಕೆ ಮಾತ್ರ)** **5 ಅಂಕಗಳು**

ಅ. 22,44,555 ಆ. 1,50,15,650 ಇ. 1,05,030 ಈ. 5,63,836
ಉ. 14,00,056 ಊ. 4,44,444 ಋ. 99,999

**6. ಈ ಕೆಳಗಿನ ಪದಗಳ ಬಹುವಚನ ರೂಪಗಳನ್ನು ಬರೆಯಿರಿ:- (ಐದಕ್ಕೆ ಮಾತ್ರ)** **5 ಅಂಕಗಳು.**

ಅ. ಗೆಳತಿ ಆ. ತೀರ್ಪು ಇ. ದಿನ ಈ. ಸೇವಕ ಉ. ಅದು
ಊ. ವಾಹನ ಋ. ರಾಜಕುಮಾರ

www.shikarat.com

**7. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ:-** **5 ಅಂಕಗಳು**

| | |
|---|---|
| **ಅ**. ಬೆಂಗಳೂರು | ಜನ ಗಣ ಮನ |
| **ಆ**. ಕು.ವೆಂ.ಪು | ಕರ್ನಾಟಕದ ರಾಜಧಾನಿ |
| **ಇ**. ಚೆನ್ನಮ್ಮ | ರಾಷ್ಟ್ರಕವಿ |
| **ಈ**. ಜನನಿ ತಾನೆ | ಕಿತ್ತೂರಿನ ರಾಣಿ |
| **ಉ**. ನಮ್ಮ ರಾಷ್ಟ್ರಗೀತೆ | ಮೊದಲ ಗುರುವು |

**೮. ಈ ಕೆಳಗಿನವುಗಳನ್ನು ಅಂಕಿಯಲ್ಲಿ ಬರೆಯಿರಿ:- (ಐದಕ್ಕೆ ಮಾತ್ರ)** **5 ಅಂಕಗಳು**

**ಅ**. ನಲವತ್ತು ಸಾವಿರದ ಏಳು ನೂರ ಎಂಭತ್ತೈದು.
**ಆ**. ಒಂದು ಲಕ್ಷ ಆರು ಸಾವಿರದ ನಾಲ್ಕು ನೂರ ಐವತ್ತು.
**ಇ**. ನಾಲ್ಕು ಲಕ್ಷದ ಐವತ್ತು ಸಾವಿರ.
**ಈ**. ಒಂದು ಕೋಟಿ ಮೂವತ್ತೈದು ಲಕ್ಷ ಇಪ್ಪತ್ತು ಸಾವಿರದ ಆರು ನೂರ ಎಂಟು.
**ಉ**. ನಲವತ್ತು ಕೋಟಿ ಮೂವತ್ತೊಂದು ಲಕ್ಷ ಒಂದು ಸಾವಿರದ ಇನ್ನೂರು.
**ಊ**. ಒಂದು ಲಕ್ಷದ ತೊಂಭತ್ತು ಸಾವಿರದ ಒಂದು.
**ಋ**. ಮೂರು ಸಾವಿರದ ನಾಲ್ಕು ನೂರ ಇಪ್ಪತ್ತಾರು.
**ೠ**. ನಾಲ್ಕು ಲಕ್ಷದ ನಲವತ್ತೈದು ಸಾವಿರದ ಎಂಟುನೂರ ಏಳು.

**೯. ಈ ಕೆಳಗಿನ ಪದಗಳಿಗೆ ವಿರುದ್ಧ ಲಿಂಗ ಬರೆಯಿರಿ:- (ಐದಕ್ಕೆ ಮಾತ್ರ)** **5 ಅಂಕಗಳು**

**ಅ**. ಮಹಾರಾಣಿ **ಆ**. ಕುರುಡ **ಇ**. ಪುಲ್ಲಿಂಗ **ಈ**. ಅಕ್ಕ **ಉ**. ಗೃಹಿಣಿ
**ಊ**. ಸನ್ಯಾಸಿ **ಋ**. ಅಧ್ಯಾಪಕ

**10.ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:-**

(Here, a story is given, and you are asked answer the question given below. Stories given in this section will not be from text. Hence, only one example is dealt here. You may follow same method for answering questions for a given story. You may read the questions first, so that you can look for the required answers. Write the answers short and as they are in the text. Note the way the last answer is made based on the material in the text.)

**ಆರೋಗ್ಯವೇ ಮನುಷ್ಯನ ನಿಜವಾದ ಭಾಗ್ಯ**. ಅರೋಗ್ಯವಿಲ್ಲದವನು ತನ್ನ ಜೀವನದಲ್ಲಿ ಏನನ್ನೂ ಸಾಧಿಸಲಾರ. ಅದನ್ನು ನಾವು ಪ್ರಾಣದಷ್ಟೇ ಚೆನ್ನಾಗಿ ಕಾಪಾಡಿಕೊಳ್ಳಬೇಕು. ಆರೋಗ್ಯ ಭಾಗ್ಯವಿದ್ದರೆ ಎಲ್ಲಾ ಭಾಗ್ಯಗಳೂ ಇದ್ದಂತೆ.

ಸಾಮಾನ್ಯವಾಗಿ ಆರೋಗ್ಯ ಕೆಡುವುದೇ ಅಹಾರದಿಂದ. **ಸರಿಯಿಲ್ಲದ ಮತ್ತು ಅತಿಯಾದ ಆಹಾರ ಸೇವನೆಯಿಂದ ಆರೋಗ್ಯಕ್ಕೆ ಹಾನಿಯಾಗುತ್ತದೆ**. ಹಿತ-ಮಿತವಾದ ಆಹಾರದಿಂದ ದೇಹಕ್ಕೂ ಮನಸ್ಸಿಗೂ ಹಿತ. ಆದ್ದರಿಂದ **"ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ"**. ಎಂಬ ಗಾದೆ ತುಂಬಾ ಸತ್ಯ.

**ಅರ್ಧ ಬೆಂದ ಆಹಾರ, ಹಳಸಿದ ಆಹಾರ, ಕೊಳಕು ಬೀದಿಯಲ್ಲಿ ಮಾರುವ ತಿಂಡಿ-ತಿನಿಸುಗಳು ಮುಂತಾದವುಗಳನ್ನು ತಿನ್ನಲೇಬಾರದು. ಸ್ವಚ್ಛವಿಲ್ಲದ, ಹೋಟೆಲು ಅಂಗಡಿಗಳಲ್ಲಿ ತಿಂಡಿಗಳನ್ನು ತಿನ್ನುವುದು, ಸ್ವಚ್ಛವಿಲ್ಲದ ನೀರನ್ನು ಕುಡಿಯುವುದು, ಆರೋಗ್ಯಕ್ಕೆ ಅಪಾಯಕಾರಿ. ಅಧಿಕವಾಗಿ ಸಿಹಿ, ಹುಳಿ, ಖಾರ ಇರುವ ಪದಾರ್ಥಗಳನ್ನು ತಿನ್ನುವುದು ಕರಿದ ತಿಂಡಿತಿನಿಸುಗಳನ್ನು ತಿನ್ನುವುದು ಆರೋಗ್ಯಕ್ಕೆ ಹಾನಿಕರ.**

www.shikarat.com

www.shikarat.com

**SHIKARAT**
Online Education

## For more contact us

**Instagram**
https://www.instagram.com/shikarat_com/

**Telegram**
https://telegram.me/shikarat

**Facebook**
https://www.facebook.com/shikarat/

**Twitter**
https://twitter.com/Shikarat_com

**Pinterest**
https://in.pinterest.com/shikarat_com/

**Website**
www.shikarat.com

**Email**
Admin@shikarat.com

**SHIKARAT**
Online Education

❤️ **Sharing is Caring** ❤️

😍**If it is helpful Please Share with your friends**😍

www.shikarat.com

ಸೂರ್ಯೋದಯಕ್ಕೆ ಮೊದಲು ಏಳುವ ಅಭ್ಯಾಸ ಇರುವುದು ಆರೋಗ್ಯಕ್ಕೆ ತುಂಬಾ ಲಾಭಕರ. ಎದ್ದ ನಂತರ ಹಲ್ಲು ನಾಲಿಗೆಗಳನ್ನು ಉಜ್ಜಿ ಸ್ವಚ್ಛಗೊಳಿಸಬೇಕು. ನಂತರ ಮೈಯಲ್ಲಿ ಕೊಳೆ ನಿಲ್ಲದಂತೆ ಉಜ್ಜಿ ಸ್ನಾನ ಮಾಡಬೇಕು. ಸದಾ ಸ್ವಚ್ಛವಾದ ಬಟ್ಟೆಯನ್ನೇ ತೊಟ್ಟುಕೊಳ್ಳಬೇಕು. ನಾವು ವಾಸ ಮಾಡುವ ಮನೆಯನ್ನು ಯಾವಾಗಲೂ ಚೊಕ್ಕಟವಾಗಿಟ್ಟುಕೊಳ್ಳಬೇಕು. ಮನೆಯಲ್ಲಿ ಗಾಳಿ, ಬೆಳಕು ಚೆನ್ನಾಗಿ ಬರುವಂತಿರಬೇಕು.

ಆರೋಗ್ಯಕ್ಕೆ ಆಹಾರದಷ್ಟೇ ವ್ಯಾಯಾಮವೂ ಮುಖ್ಯ. ಪ್ರತಿ ದಿನ ಒಂದು ಘಂಟೆ ಕಾಲವಾದರೂ ವ್ಯಾಯಾಮ ಮಾಡಬೇಕು. ನಿಮ್ಮ ಅಭಿರುಚಿಯ ಆಟಗಳಲ್ಲಿ ಭಾಗವಹಿಸುವುದು ಒಳ್ಳೆಯದು. ಬೆಳಗ್ಗೆ ಮತ್ತು ಸಂಜೆ ಒಳ್ಳೆಯ ಗಾಳಿ ಇರುವ ಪ್ರದೇಶದಲ್ಲಿ ಸುತ್ತಾಡುವ ಅಭ್ಯಾಸ ಇಟ್ಟುಕೊಳ್ಳುವುದು ಒಳ್ಳೆಯದು.

ಆರೋಗ್ಯ ಕೆಟ್ಟಾಗ ವೈದ್ಯರ ಸಲಹೆ ಪಡೆಯುವುದು ಒಳ್ಳೆಯದು. ವೈದ್ಯರ ಸಲಹೆ ಇಲ್ಲದೆ ಏನಾದರೊಂದು ಔಷಧ ಬಳಸುವುದು ತಪ್ಪು. ಆದಷ್ಟು ಆರೋಗ್ಯ ಕೆಡದಂತೆ ನೋಡಿಕೊಳ್ಳುವುದು ಒಳ್ಳೆಯದು. ಆರೋಗ್ಯವನ್ನು ಕೆಡಿಸಿಕೊಂಡು ವೈದ್ಯರ ಬಳಿ ಹೋಗುವುದು ತಪ್ಪು.

1. ಮನುಷ್ಯನ ನಿಜವಾದ ಭಾಗ್ಯ ಯಾವುದು? — 1 ಅಂಕ
2. ಆರೋಗ್ಯ ಯಾವ ಕಾರಣದಿಂದ ಕೆಡುತ್ತದೆ? — 1 ಅಂಕ
3. ಆರೋಗ್ಯಕ್ಕೆ ಸಂಬಂಧಿಸಿದ ಗಾದೆ ಮಾತು ಯಾವುದು? — 1 ಅಂಕ
4. ಯಾವ ರೀತಿಯ ಆಹಾರಗಳನ್ನು ತಿನ್ನಬಾರದು? — 4 ಅಂಕಗಳು
5. ಆರೋಗ್ಯವನ್ನು ಕಾಪಾಡಿಕೊಳ್ಳಲು ಯಾವ ಯಾವ ನಿಯಮ ಪಾಲಿಸಬೇಕು? — 3 ಅಂಕಗಳು

11. ಬಿಟ್ಟ ಸ್ಥಳಗಳನ್ನು ತುಂಬಿರಿ:- — 5 ಅಂಕಗಳು

ಅ. ಕು.ವೆಂ.ಪು : ರಾಮಾಯಣ ದರ್ಶನಂ :: ದ.ರಾ.ಬೇಂದ್ರೆ : __________

ಆ. ಗಡಿನಾಡ ಗಾಂಧಿ : __________ :: ಉಕ್ಕಿನ ಮನುಷ್ಯ : ಸರ್ದಾರ್ ವಲ್ಲಭಭಾಯಿ ಪಟೇಲ್.

ಇ. _________ : ನಮ್ಮ ರಾಷ್ಟ್ರ ಪಕ್ಷಿ :: ತ್ರಿವರ್ಣ ಧ್ವಜ : ನಮ್ಮ ರಾಷ್ಟ್ರಧ್ವಜ.

ಈ. ಅಕ್ಬರ್ : ಬೀರಬಲ್ :: _________ : ಕೃಷ್ಣದೇವರಾಯ.

ಉ. ಮಕ್ಕಳ ದಿನಾಚರಣೆ : ನವೆಂಬರ್ 14 :: _________ : ಸೆಪ್ಟೆಂಬರ್ 5.

12. ಈ ಕೆಳಗಿನ ಪದಗಳಿಗೆ ಲಿಂಗ ಗುರುತಿಸಿ:- (ಪುಲ್ಲಿಂಗ / ಸ್ತ್ರೀಲಿಂಗ/ ನಪುಂಸಕ ಲಿಂಗ) (ಐದಕ್ಕೆ ಮಾತ್ರ) — 5 ಅಂಕಗಳು

ಅ. ಸ್ನೇಹಿತ ಆ. ಶಿಕ್ಷಕ ಇ. ಚಿಕ್ಕಪ್ಪ ಈ. ಪಾತ್ರೆ ಉ. ಪತ್ನಿ
ಊ. ಭಕ್ತೆ ಋ. ದಾಸ

13. ಪ್ರಬಂಧವನ್ನು ಬರೆಯಿರಿ:- (ಯಾವುದಾದರೂ ಒಂದು) — 5 ಅಂಕಗಳು

ಅ. ನಮ್ಮ ರಾಷ್ಟ್ರಗೀತೆ ಆ. ಸ್ವಚ್ಛ ಭಾರತ ಆಂದೋಲನ

******************

www.shikarat.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ನವೆಂಬರ್–2016

## ಕನ್ನಡ ಭಾಷಾ ಪರೀಕ್ಷೆ - ಪತ್ರಿಕೆ–2

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

ದಿನಾಂಕ: 26.11.2016 ಗರಿಷ್ಠ ಅಂಕಗಳು–50 ಸಮಯ: ಬೆಳಗ್ಗೆ 12.00 ರಿಂದ 1.00 ರವರೆಗೆ

---

**1. ಆಂಗ್ಲ ಭಾಷೆಗೆ ಅನುವಾದಿಸಿ:** **10 ಅಂಕಗಳು**

**ಸೌರ ಶಕ್ತಿ**

ಮಾನವನು ಅನಾದಿಕಾಲದಿಂದಲೂ ತನ್ನ ನಿತ್ಯ ಉಪಯೋಗಕ್ಕಾಗಿ ಹಲವಾರು ಶಕ್ತಿಗಳನ್ನು ಬಳಸುತ್ತಿದ್ದಾನೆ. ಅವುಗಳೇ ಜಲಶಕ್ತಿ, ಪವನ ಶಕ್ತಿ, ಅಶ್ವ ಶಕ್ತಿ, ಮಾನವ ಶಕ್ತಿ, ಮೊದಲಾದವು. ವಿಜ್ಞಾನ ಬೆಳೆದಂತೆಲ್ಲಾ ನೀರಿನಿಂದ ವಿದ್ಯುತ್ ಶಕ್ತಿಯನ್ನು, ಪೆಟ್ರೋಲ್, ಎಲ್‌ಪಿಜಿ ಗ್ಯಾಸ್ ನಿಂದ ಇಂಧನ ಶಕ್ತಿಯನ್ನು ತಯಾರಿಸಿ ಬಳಸ ತೊಡಗಿದೆ. ಕೊನೆಗೆ ಅಣುಶಕ್ತಿ ಅವಿಷ್ಕವಾಯಿತು. ಈ ಎಲ್ಲಾ ಶಕ್ತಿಗಳ ಮೂಲ ಸೂರ್ಯ. ಸೂರ್ಯನಿಂದ ಪಡೆಯುವ ಶಕ್ತಿಯೇ ಸೌರ ಶಕ್ತಿ. ಸೂರ್ಯನೇ ಈ ಶಕ್ತಿಯ ಮೂಲ.
ನಮ್ಮ ಕರ್ನಾಟಕದಲ್ಲೂ ಸೌರ ಶಕ್ತಿಯ ಬಳಕೆಗೆ ಇಂಧನ ಇಲಾಖೆಯು ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದು, ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಕೈಗಾರಿಕೆಗಳಗೆ ಸಂಚಾರ ವ್ಯವಸ್ಥೆಗೆ ಹೆಚ್ಚು ಬಳಕೆಯಾಗುತ್ತಿದೆ. ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ, ಅನಾಯಾಸವಾಗಿ ದೊರೆಯುವ ಸೌರಶಕ್ತಿ ಬಳಕೆಯಿಂದ ಆರ್ಥಿಕ ವೆಚ್ಚ ಕಡಿಮೆ ಮಾಡ ಬಹುದು. ಈ ದಿಸೆಯಲ್ಲಿ ಕರ್ನಾಟಕ ಸರ್ಕಾರ ದಿಟ್ಟ ಹೆಜ್ಜೆ ಇಡುತ್ತಿದೆ.

**2. ಈ ಕೆಳಗಿನ ಪದಗಳಲ್ಲಿ ಯಾವುದಾದರೂ 10ನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ:** **10 ಅಂಕಗಳು**

| | | | |
|---|---|---|---|
| **ಅ.** ಮೂಲ ವೇತನ | **ಆ.** ವೃತ್ತ ಪತ್ರಿಕೆ | **ಇ.**ವಾಹನ ಭತ್ಯೆ | **ಈ.** ಗ್ರಾಹಕ |
| **ಉ.** ಉಗ್ರಾಣ | **ಊ.** ವಿಚಾರಣೆ | **ಋ.** ಆದಾಯ | **ೠ.** ಅತಿಥಿ ಗೃಹ |
| **ಎ.** ಜರೂರು | **ಏ.** ಪ್ರಮಾಣ ಪತ್ರ | **ಐ.** ಸೇವಾ ತೆರಿಗೆ | |

**3. ಈ ಕೆಳಗಿನ ವಾಕ್ಯಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸುವುದು:(5ಕ್ಕೆ ಮಾತ್ರ)** **5 ಅಂಕಗಳು.**

**(ಅ)** ಗಿಡ ಬೆಳೆಸಿ ಪರಿಸರ ಉಳಿಸಿ.

**(ಆ)** ಗ್ರಾಹಕರ ದೂರುಗಳಿಗೆ ಆದ್ಯತೆ ಕೊಡುವುದು.

**(ಇ)** ರೈತರು ದೇಶದ ಬೆನ್ನೆಲುಬು.

**(ಈ)** ಅಂಚೆ ಚೀಟಿಗಳನ್ನು ಸಂಗ್ರಹಿಸುವುದು ಒಂದು ಉತ್ತಮ ಹವ್ಯಾಸ.

**(ಉ)** ಕಾಯಕವೇ ಕೈಲಾಸ.

**(ಊ)** ಧೂಮಪಾನವು ಆರೋಗ್ಯಕ್ಕೆ ಹಾನಿಕರ.

www.shikarat.com

4. ಕನ್ನಡ ಭಾಷೆಗೆ ಭಾಷಾಂತರಿಸಿ: 10 ಅಂಕಗಳು

The students of today are the future citizens of India. They are the architects of free and modern India. The great responsibility of nation building lies on the students. The students should develop the habit of discipline in order to face any situation with confidence and success. The students can revive the lost glory of India with a strong will, sacrifice, honesty and character.

5. ಈ ಕೆಳಗಿನ ಪದಗಳಲ್ಲಿ ಯಾವುದಾದರೂ 10ನ್ನು ಕನ್ನಡ ಭಾಷೆಗೆ ಅನುವಾದಿಸಿ: 10 ಅಂಕಗಳು

**(1)** Managing Director **(2)** Family Pension

**(3)** Departmental Enquiry **(4)** Depreciation

**(5)** Corporate Office **(6)** Transformer

**(7)** Designation **(8)** Voluntary Retirement

**(9)** Last pay certificate **(10)** Receipt

**(11)** Travelling Allowance **(12)** Guest House

6.ಈ ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸಿ: 5 ಅಂಕಗಳು

**1**. Peacock is our National Bird.

**2**. Independence Day and Republic Day are National festivals.

**3**. President is first citizen of India.

**4**.Always speak the truth.

**5**. Work is worship.

*********

www.shikarat.com